<u>ಸಾಕ್ಷಿಗೆ ದಿನಾಂಕ *08-07-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : *2* ನೇ ಎದರುದಾರರ ಪರ ಶ್ರೀ ಎ ಜಿ ಪಿ ಯವರಿಂದ</u>

ನನ್ನ ಜಮೀನಿನ ಸರ್ವೆ ನಂ. 72/2 ಕ್ಷೇತ್ರ 12 ಎಕರೆ ಮೇಲು ಗುಂಟೆ ಇರುತ್ತದೆ. ಅದರಲ್ಲಿ 2 ಎಕರೆ 32 ಗುಂಟೆ ಸ್ವಾಧೀನ ಆಗಿರುತ್ತದೆ. ಈ ಜಮೀನು ಮೊದಲು ನನ್ನ ಅಜ್ಜನ ಹೆಸರಿನಲ್ಲಿ ಇತ್ತು. ಮೊದಲು ಶಿವಪ್ಪ ಮತ್ತು ಸಂಗಪ್ಪ ರವರ ಹೆಸರಿನಲ್ಲಿ ಇತ್ತು. 2 ಎಕರೆ 32 ಗುಂಟೆ ಕ್ಷೇತ್ರವನ್ನು ಕಾವಲಿಗೊಸ್ಕರ ಸ್ವಾಧೀನಪಡಿಸಿಕೊಂಡಿದ್ದರು. ಸದರಿ ಜಮೀನು ಈಗ ಅರ್ಜಿದಾರರ ಹೆಸರಿನಲ್ಲಿ ಇರುತ್ತದೆ. 2001-02 ರಲ್ಲಿ ರಾಜ್ಯ ಸರಕಾರ ದವರು ಸದರಿ ಜಮೀನನ್ನು ವಶಪಡಿಸಿಕೊಂಡಿರುತ್ತಾರೆ. ಸರಕಾರದವರು ಶಿವಪ್ಪ ಮತ್ತು ಸಂಗಪ್ಪ ರವರಿಗೆ ನೋಟೀಸ ನೀಡಿ ಜಮೀನನ್ನು ವಶಪಡಿಸಿಕೊಂಡಿದ್ದರು ಎಂದರೆ ಸಾಕ್ಷಿದಾರರು ನೋಟೀಸ ನೀಡಿದ್ದರ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಸರಕಾರದವರು ವಶಪಡಿಸಿಕೊಂಡಿದ್ದರ ಬಗ್ಗೆ ಮಾಹಿತಿ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 2008 ರಲ್ಲಿ ಮಾಹಿತಿ ಗೊತ್ತಾಗಿರುತ್ತದೆ. 2008 ರಲ್ಲಿ ಮಾಹಿತಿ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಜಮೀನಿನಲ್ಲಿ ಎರಡು ಪೀಕ ಬೆಳೆ ಬೆಳೆಯುತ್ತೇವೆ. ನಾವು ಪಕ್ಕದ ಜಮೀನಿನವರ ಕಡೆಯಿಂದ ನೀರು ತೆಗೆದುಕೊಂಡು ಬೆಳೆ ಬೆಳೆಯುತ್ತೇವೆ. ನಾವು ಎರಡೂ ಪೀಕ ಬೆಳೆಯಿಂದ 2 ವರೆ ಲಕ್ಷದಿಂದ 3 ಲಕ್ಷ ರೂ.ಗಳ ವರೆಗೆ ಆದಾಯ ಗಳಿಸುತ್ತೇವೆ. ನಾವು ಪಕ್ಕದ ಜಮೀನಿನಿಂದ ನೀರು ತೆಗೆದುಕೊಂಡು 2 ಪೀಕ ಬೆಳೆ ಬೆಳೆಯುತ್ತೇವೆ ಎಂದು ಮತ್ತು 2 ರಿಂದ 3 ಲಕ್ಷ ರೂ.ಗಳ ಆದಾಯ ಗಳಿಸುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ಫಲವತ್ತಾದ ಭೂಮಿ ಎಂದು ಮತ್ತು ಅದು ಎಕರೆಗೆ 30 ರಿಂದ 40 ಲಕ್ಷ ರೂ.ಗಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ರಾ. ಹೆದ್ದಾರಿಗೆ ಹೊಂದಿಕೊಂಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾನ್ಯ ಸರಕಾರದವರು ಯೋಗ್ಯಬೆಲೆಯನ್ನು ಕೊಟ್ಟು ನಮ್ಮ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹೀಗಾಗಿ ಹೆಚ್ಚಿನ ಮೌಲ್ಯವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : 1 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯವನ್ನು ಕೋರಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುನಗುಂದ.